# ಒಪೆಕ್ ಪ್ಲಸ್ (OPEC+)

INSTAKAS




## ಇತ್ತೀಚೆಗೆ ಸುದ್ದಿಯಲ್ಲಿದೆ:

ಜಾಗತಿಕ ಇಂಧನ ಬಿಕ್ಕಟ್ಟು ಹೆಚ್ಚಾಗುತ್ತಿರುವ ಹಿನ್ನೆಲೆಯಲ್ಲಿ, **ಪೆಟ್ರೋಲಿಯಂ ರಫ್ತು ಮಾಡುವ ದೇಶಗಳ ಸಂಘಟನೆಯು** (OPEC) ತನ್ನ ತೈಲ ಉತ್ಪಾದನೆಯನ್ನು ದಿನಕ್ಕೆ 206,000 ಬ್ಯಾರೆಲ್‌ಗಳಷ್ಟು ಹೆಚ್ಚಿಸಲು ನಿರ್ಧರಿಸಿದೆ.

## ಪೆಟ್ರೋಲಿಯಂ ರಫ್ತು ಮಾಡುವ ದೇಶಗಳ ಸಂಘಟನೆ (OPEC)ಯ ಬಗ್ಗೆ:

- **OPEC ಪೂರ್ಣ ರೂಪ:– ಪೆಟ್ರೋಲಿಯಂ ರಫ್ತು ಮಾಡುವ ದೇಶಗಳ ಸಂಘಟನೆ (OPEC- The Organization of the Petroleum Exporting Countries) ಒಂದು ಕಾಯಂ ಅಂತರ–ಸರ್ಕಾರಿ ಸಂಸ್ಥೆಯಾಗಿದೆ.** ಇದನ್ನು ಸೆಪ್ಟೆಂಬರ್ 1960 ರಲ್ಲಿ ನಡೆದ **ಬಾಗ್ದಾದ್ ಸಮ್ಮೇಳನದಲ್ಲಿ** ಸ್ಥಾಪಿಸಲಾಯಿತು.

- **ಸಂಸ್ಥಾಪನ ಸದಸ್ಯ ರಾಷ್ಟ್ರಗಳು:– ಇರಾನ್, ಇರಾಕ್, ಕುವೈತ್, ಸೌದಿ ಅರೇಬಿಯಾ ಮತ್ತು ವೆನೆಜುವೆಲಾ.**

- **ಪ್ರಸ್ತುತ OPECನ 12 ಸದಸ್ಯ ರಾಷ್ಟ್ರಗಳಿವೆ:–** ಅಲ್ಜೀರಿಯಾ, ಕಾಂಗೋ, ಈಕ್ವಟೋರಿಯಲ್ ಗಿನಿಯಾ, ಗ್ಯಾಬೊನ್, ಇರಾನ್, ಇರಾಕ್, ಕುವೈತ್, ಲಿಬಿಯಾ, ನೈಜೀರಿಯಾ, ಸೌದಿ ಅರೇಬಿಯಾ, ಯುನೈಟೆಡ್ ಅರಬ್ ಎಮಿರೇಟ್ಸ್ (UAE) ಮತ್ತು ವೆನೆಜುವೆಲಾ.

- **ಪ್ರಧಾನ ಕಚೇರಿ:–** ಆಸ್ಟ್ರಿಯಾದ ವಿಯೆನ್ನಾ.

- ಒಪೆಕ್ ಸದಸ್ಯ ರಾಷ್ಟ್ರಗಳು ಪ್ರಪಂಚದ ಒಟ್ಟು ಪ್ರಮಾಣೀಕೃತ **ತೈಲ ನಿಕ್ಷೇಪಗಳಲ್ಲಿ 80% ಕ್ಕಿಂತ ಹೆಚ್ಚಿನ ಪಾಲನ್ನು** ಹೊಂದಿವೆ.

- ಒಪೆಕ್ ಸದಸ್ಯ ರಾಷ್ಟ್ರಗಳು ಪ್ರಪಂಚದ ಒಟ್ಟು ಪ್ರಮಾಣೀಕೃತ ತೈಲ ನಿಕ್ಷೇಪಗಳಲ್ಲಿ **80% ಕ್ಕಿಂತ ಹೆಚ್ಚಿನ ಪಾಲನ್ನು** ಹೊಂದಿವೆ.

- ಒಪೆಕ್ ಸದಸ್ಯ ರಾಷ್ಟ್ರಗಳು ವಿಶ್ವದ ಒಟ್ಟು ಕಚ್ಚಾ ತೈಲದ ಶೇ. 40% ರಷ್ಟನ್ನು ಉತ್ಪಾದಿಸುತ್ತದೆ ಮತ್ತು ಜಾಗತಿಕ ಪೆಟ್ರೋಲಿಯಂ ವ್ಯಾಪಾರದಲ್ಲಿ ಸುಮಾರು 60% ರಷ್ಟು ರಫ್ತು ಪಾಲನ್ನು ಹೊಂದಿವೆ.

## ಒಪೆಕ್ ಪ್ಲಸ್ (OPEC+)ನ ಬಗ್ಗೆ:

- ಒಪೆಕ್ ಸಂಘಟನೆಯು **2016 ರಲ್ಲಿ,** ಇತರ ತೈಲ ಉತ್ಪಾದಿಸುವ ರಾಷ್ಟ್ರಗಳೊಂದಿಗೆ ಮೈತ್ರಿ ಮಾಡಿಕೊಂಡು ಒಪೆಕ್ ಪ್ಲಸ್ (OPEC+) ಅನ್ನು ರಚಿಸಿತು.

- **OPEC+10 ಒಪೆಕ್‌ಯೇತರ ಪಾಲುದಾರ ರಾಷ್ಟ್ರಗಳ ಗುಂಪಾಗಿದೆ:** ಅವುಗಳೆಂದರೆ, ಅಜೆರ್ಬೈಜಾನ್, ಬಹ್ರೇನ್, ಬ್ರೂನಿ, ಕಜಕಿಸ್ತಾನ್, ಮಲೇಷ್ಯಾ, ಮೆಕ್ಸಿಕೋ, ಒಮಾನ್, ರಷ್ಯಾ, ದಕ್ಷಿಣ ಸುಡಾನ್ ಮತ್ತು ಸುಡಾನ್ ದೇಶಗಳನ್ನು ಒಳಗೊಂಡಿದೆ.




